ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಹರಿಹರ
27/2016

ಪಿ ಡಬ್ಲ್ಯೂ-23

ಸಾಕ್ಷಿಯ ಹೆಸರುಃ ಮಂಜಾನಾಯ್ಕ ಸಿ ಡಬ್ಲ್ಯೂ-26

ತಂದೆಯ ಹೆಸರುಃ ತಾವರ್ಯಾ ನಾಯ್ಕ

ವಯಸ್ಸುಃ 45

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ಯಲವಟ್ಟಿ

ಸಾಕ್ಷಿಯನ್ನು ದಿನಾಂಕ ಃ07.01.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ಆರೋಪಿ ಪರಿಚಯ ಇರುತ್ತಾನೆ. ನಾನು ಬೇರೆಯವರ ಜಮೀನಿನಲ್ಲಿ ಲಾವಣಿ ಮಾಡುತ್ತಿದ್ದೆ . ಸದರಿ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದೆ. 2010 ರಲ್ಲಿ ನಾನು ಭತ್ತ ಬೆಳೆದಿದ್ದೆ. ಸದರಿ ಭತ್ತದ ಬಗ್ಗೆ ನಂದಿತಾವರೆಯ ಕ್ಯಾಂಪನಲ್ಲಿರುವ ಮಿಲ್ಲಿನಲ್ಲಿ ಆರೋಪಿಯ ಜೊತೆ ಮಾತನಾಡಿರುತ್ತೇನೆ. 1100/- ರೂಗಳಿಗೆ ಒಂದು ಕ್ವಿಂಟಲ್ ನಂತೆ ಮಾತುಕತೆ ಆಗಿರುತ್ತದೆ. ನನ್ನ 77 ಚೀಲ ಭತ್ತವನ್ನು ಕೊಟ್ಟಿರುತ್ತೇನೆ. ಸದರಿ ಹಣವನ್ನು ಒಂದುವರೆ ತಿಂಗಳು ಬಿಟ್ಟು ಕೊಡುತ್ತೇನೆ ಎಂದು ಹೇಳಿರುತ್ತಾನೆ. ನನಗೆ 63,000/- ಚಿಲ್ಲರೆ ಹಣ ಕೊಡಬೇಕಾಗಿತ್ತು ಅದರಲ್ಲಿ 10,000/- ರೂಗಳನ್ನು ಕೊಟ್ಟಿದ್ದ ಉಳಿದ ಹಣ ಒಂದುವರೆ ತಿಂಗಳ ನಂತರ ಕೊಡುತ್ತೇನೆ ಎಂದು ಹೇಳಿದ್ದ. ಅದರಂತೆ ನಮ್ಮ ಭತ್ತವನ್ನ ತೂಕಮಾಡಿಸಿ ಮಿಲ್ಲಗೆ ಕಳುಹಿಸಿರುತ್ತೇನೆ. ನಂತರ ಕ್ಯಾಂಪಗೆ ಹೋಗಿ ಕೇಳಿದಾಗ ಮೋಸ ಮಾಡಿ ಹೋಗಿರುತ್ತಾನೆ ಎಂದು ತಿಳಿಸಿರುತ್ತಾರೆ. ಆರೋಪಿ ನನಗೆ ಮತ್ತು ಇತರರಿಗೆ ಮೋಸ ಮಾಡಿರುತ್ತಾನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ನನ್ನ ಸ್ವಂತ ವ್ಯವಸಾಯದ ಜಮೀನು ಇರುವುದಿಲ್ಲ. ಲಾವಣಿ ಪತ್ರ ವನ್ನು ತನಿಖಾಧಿಕಾರಿ ಮುಂದೆ ಹಾಜರು ಪಡಿಸಿಲ್ಲ 2010 ರಲ್ಲಿ ನಾನು ಭತ್ತ ಬೆಳೆದ ಕುರಿತು ಪಹಣಿಯನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ. ರೈಸ್ ಮಿಲ್ಲ್ ನಾಗೇಶ್ವರರಾವ್ ಇವರಿಗೆ ಸೇರಿದ್ದು ಎನ್ನುವುದು ನಿಜ. ಆರೋಪಿಯಿಂದ ಖರೀದಿ ಬಿಲ್ಲನ್ನು ತೆಗೆದುಕೊಂಡಿರುತ್ತೇನೆ ಅದನ್ನು ಪೋಲಿಸರ

ಮುಂದೆ ಹಾಜರು ಪಡಿಸಿರುತ್ತೇನೆ. ನಾನು ಕ್ಯಾಂಪಗೆ ಹೋದಾಗ ಆರೋಪಿ ಮೋಸ ಮಾಡಿ ಹೋಗಿರುತ್ತಾನೆ ಎಂದು ನನಗೆ ತಿಳಿಸಿದಂತವರ ಹೆಸರು ವಿಳಾಸ ಹೇಳಲು ಆಗುವುದಿಲ್ಲ. ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಹೇಳಿಕೆಯನ್ನು ತೆಗೆದುಕೊಂಡಿಲ್ಲ. ಆರೋಪಿ ನನಗೆ 53,000/- ಚಿಲ್ಲರೆ ಹಣ ಕೊಡಬೇಕು ಎಂದು ಹಣ ವಸೂಲಾತಿಗಾಗಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿಲ್ಲ. ಆರೋಪಿ ಮೂಲತಃ ನಂದಿತಾವರೆ ಗ್ರಾಮದವನಾಗಿದ್ದು ಅವನಿಗೆ ಜಮೀನು , ಮನೆ ಹೆಂಡತಿ ಮಕ್ಕಳು ಇರುತ್ತಾರೆ ಎನ್ನುವುದು ನಿಜ. ನಾನು ಆರೋಪಿಗೆ 77 ಚೀಲ ಭತ್ತವನ್ನು ಮಾರಾಟ ಮಾಡಿದು ಆರೋಪಿಯಿಂದ ನನಗೆ 53000 ಚಿಲ್ಲರೆ ಹಣ ಬರಬೇಕಾಗಿತ್ತು ಎಂದು ಹೇಳಿದ್ದು ಸುಳ್ಳು ಇದ್ದು ನಾನು ಎಂದಿಗೂ ಆರೋಪಿಗೆ ಭತ್ತ ಮಾರಾಟ ಮಾಡಿಲ್ಲ ಅಂದರೆ ಸರಿಯಲ್ಲ. ಪೋಲಿಸರ ಮಾತನ್ನು ಕೇಳಿ ಮತ್ತು ಪಿರ್ಯಾದಿದಾರರ ಮಾತನ್ನು ಕೇಳಿ ಆರೋಪಿ ಮೋಸ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಸಾ 21 ರಿಂದ 24 ಮತ್ತು 27 ಒಂದೇ ಊರಿನವರಿದ್ದು ನಾವೆಲ್ಲಾ ಬೇಕಾದವರು ಎನ್ನುವುದು ನಿಜ. ಆರೋಪಿ ನನಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲದೇ ಇದ್ದರೂ ಸಹ ನನಗೆ ಮೋಸ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹರಿಹರ